ಸಾಕ್ಷಿಯನ್ನು ದಿಃ 02-07-2026 ರಂದು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆ ಮಾಡಲಾಯಿತು.

**ಪಾಟೀ ಸವಾಲುಃ ಶ್ರೀ ಎಮ್ ಪಿ ಟಿ ವಕೀಲರಿಂದ (ಎದುರುದಾರ ನಂ.3 ಪರವಾಗಿ-ಅರ್ಜಿ ಆದೇಶದಿಂದೆ)**

ನಾನು 7 ನೇ ತರಗತಿಯವರಿಗೆ ಓದಿದ್ದೇನೆ. ಅಪಘಾತದಲ್ಲಿ ನನಗೆ ಗಾಯ ಆಗಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ಮಗಳು ಸನ್ನಿಧಿಗೆ ಗಾಯ ಆಗಿದೆ ಎಂದು ಹೇಳುತ್ತಾರೆ. ಅಪಘಾತವನ್ನು ನಾನು ನೋಡಿದ್ದೇನೆ. ಆ ದಿನ ಅಪಘಾತಪಡಿಸಿದ ಮೋಟಾರ್ ಸೈಕಲ್ ನ್ನು ಅಲ್ಪವಯಿ ಬಾಲಕ ಚಲಾಯಿಸುತ್ತಿದ್ದ ಎಂದರೆ ಸರಿ. ಅಪಘಾತಪಡಿಸಿದ ಬಾಲಕನ ಹೆಸರು ಹುಸೇನಸಾಬ @ ಹುಸೇನಬಾಷಾ ತಂದೆ ಚಂದುಸಾಬ ನದಾಫ್ ಎಂದರೆ ಸರಿ. ಸದರಿ ಹುಸೇನಬಾಷಾನ ತಪ್ಪಿನಿಂದ ಅಪಘಾತ ಆಗಿದೆ ಎಂದು ಪೊಲೀಸರು ಚಾರ್ಜಶೀಟ್ ಸಲ್ಲಿಸಿದ್ದಾರೆ ಎಂದರೆ ಸರಿ. 2 ನೇ ಅರ್ಜಿದಾರಳಿಗೆ ಸಾದಾ ಸ್ವರೂಪದ ಗಾಯಗಳಾಗಿದ್ದು ಈಗ ಆಕೆ ಸಂಪೂರ್ಣವಾಗಿ ಗುಣಮುಖಳಾಗಿದ್ದಾಳೆ ಎಂದರೆ ಸರಿಯಲ್ಲ. ಪೊಲೀಸ ದಾಖಲೆ ಹೊರತುಪಡಿಸಿ ಯಾವುದೇ ದಾಖಲೆ ಹಾಜರಪಡಿಸಿಲ್ಲ ಎಂದರೆ ಸರಿಯಲ್ಲ. ವಿಮಾ ಪಾಲಿಸಿ ಷರತ್ತು ಉಲ್ಲಂಘನೆಯಾಗಿರುವುದರಿಂದ ನಮಗೆ ಪರಿಹಾರ ನೀಡಲು ವಾಹನ ಮಾಲೀಕ ಮಾತ್ರ ಬಾಧ್ಯಸ್ಥ ಎಂದರೆ ಸರಿಯಲ್ಲ. ನಮಗೆ ಪರಿಹಾರ ನೀಡಲು ಎದುರುದಾರ ವಿಮಾ ಸಂಸ್ಥೆಯವರು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ಸುಳ್ಳು ಅರ್ಜಿ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಗದಗ.